ಹೇಳುತ್ತಾರೆ. ಹೆಂಗಸರು ಸಮಾಧಾನಗೆಡಬಾರದು, ಅದರಲ್ಲೂ ಮನೆಗಂಡನ ವಿಷಯದಲ್ಲಿ ಎನ್ನುವವರೇ. ಅವರಾದರೂ ಪಾಪ ಇನ್ನೇನು ಮಾಡಿಯಾರು? ಅವನು ದೇವರಂಥ ಮನುಷ್ಯ ಅಂತಾನೇ ಹೊಸ್ತಿಲಾಚೆಯ ಪ್ರತೀತಿ.

ಕಂಪನಿ ರಜೆಯ ರವಿವಾರವೋ ಮಂಗಳವಾರವೋ ಕೆಲಸದಾಕಿ ಬೆಡ್‌ರೂಂ ಒರೆಸಲು ಹೋದರೆ, ಅವಳೂ ಕೈಯಲ್ಲೊಂದು ಕೆಂಪು ಚೌಕಳಿ ವಸ್ತ್ರ ಹಿಡಿದು ದಡಬಡಾಯಿಸಿ ಮುಂದಾಗಿ ಹೋಗಿ, ಕನ್ನಡಿ-ಕಿಟಕಿ ಅಂತ ಕೈಯಾಡಿಸುತ್ತಾಳೆ. ಪಾಪ, ಗಂಡ ಹಾಸಿಗೆಯಲ್ಲಿ ಉರುಳಿ ಮೊಬೈಲ್‌ನಲ್ಲಿದ್ದಾನೆ. ಅವನಿಗೆ ಕಿರಿಕಿರಿ ಆದೀತು ಅಂತಿರಬೇಕು ಎಂದು ಕೆಲಸದಾಕಿ ಲೆಕ್ಕ. ಅವಳೂ ಮೊಮ್ಮಕ್ಕಳೊಂದಿಗಳೇ. ಆದರೆ, ದುಡಿದು ಕಟ್ಟುಮಸ್ತಾದ ದೇಹ. ಇವನ ತಲುಬಿಗೆ, ಮೈಸನ್ನೆ ಕಣ್ಸನ್ನೆಗಳಿಗೆ ಹೇಸಿ ಬರದಂತಾದರೆ? ಅಥವಾ ಆ ಹಿಂದಿನಾಕಿ ಮಾಡಿದಳಲ್ಲ ಹಾಗೆ, ‘ಮನ್ಯಾನ ಹೆಂಗೂಸರು ನೆಟ್ಟಗಿದ್ದರೆ ಗಂಡೂಸರು ಯಾಕ ಮಂಗ್ಯಾನಂಗಾಡ್ತಾರಾ?’ ಅಂತ ತನಗೇ ಲಾತ ಕೊಟ್ಟು ನಡೆದಳಲ್ಲ. ಹಾಗಾಗೋದು ಬೇಡ ಅಂತ ಇವಳ ಲೆಕ್ಕ. ‘ನೆಟ್ಟಗಿರೋದು ಅಂದ್ರ ಹ್ಯಾಂಗ?’ ಅನ್ನೋ ಒಗಟು ಬಿಡಿಸಿದಷ್ಟೂ ಸಿಕ್ಕಾಗುತ್ತ, ಸುರುಳಿ ಸುತ್ತುತ್ತ ಹೈರಾಣಾಗಿಸಿದ್ದು ಹಸಿಯಾಗೇ ಇದೆ.

ಇನ್ನೇನು, ಅವರ ಮದುವೆಯ ಆ್ಯನಿವರ್ಸರಿಗೆ ಐದು ದಿನ ಮಾತ್ರ ಬಾಕಿಯಿದೆ. ಅವನಿಗೆ ಸುತಾರಾಂ ನೆನಪಾಗುವುದಿಲ್ಲ ಅಂತ ಅವಳಿಗೆ ಗೊತ್ತಿದೆ. ಆದರೆ, ಮಣ್ಣಾಗ ಅಡಗ್ಲಿ ಈ ಫೇಸ್‌ಬುಕ್ ಅನ್ನೋ ದೆವ್ವ ಬಿಡಬೇಕಲ್ಲ. ಇಂವ ಅಂಥದ್ದೆಲ್ಲ ತಪ್ಪಿಸಿಕೊಳ್ಳಾಂವನೇ ಅಲ್ಲ. ಯಾವುದರ ಹಳೇ ಫೋಟೋ ತಗಂಡು ಕರುಳು ಚುರ್ ಅನ್ನೂಹಾಂಗ ಬರ್ದು ಲೈಕ್ ಹಾಕಿಸಿಕೊಳ್ಳಾವಂನ. ಅದಕ್ಕೇ ಅವಳಿಗೆ ತಡೆದುಕೊಳ್ಳಲೇ ಆಗ್ತಿಲ್ಲ. ಒಂದೇ ಮನೆಯಲ್ಲಿ ಅವನಷ್ಟಕ್ಕೆ ಅವನು, ಅವಳಷ್ಟಕ್ಕೆ ಅವಳು ಉಳಿದು ಸಾಕಾಗಿದೆ. ತಾಟಿಗೆ ಹಾಕಿದ ಊಟ ಗಂಟಲಿಗಿ ಇಳಿಯಬೇಕೆಂದರೆ, ಅದೂ ತನಾ ಹಾಲ್‌ನ ಮೂಲೆಯಲ್ಲಿ ಜಪ್ಪನ್ನದೆ ಕೂತ ಟಿ.ವಿ. ಒಂದೇ ಸಮಾ ಒದರಲು ಶುರು ಮಾಡಬೇಕು. ಅಲ್ಲಿ ಯಾವ ಬ್ಯಾವರ್ಸಿ ಯಾರನ್ನಾದರೂ ಏನನ್ನಾದರೂ ಅನ್ನಲಿ. ಯಾರು ಬೇಕಾದರೂ ಕೊಚ್ಚಾಡಿಕೊಂಡು ಚೂರಾಗಿ ಹೋಗಲಿ. ಯಾವ ಬಸ್ಸು ಯಾರನ್ನಾದರೂ ಡಬ್ಬು ಕೆಡವಲಿ. ಮಳೆ ಸುರಿಯಲಿ, ಬರ ಕರೆಯಲಿ, ಪರಸ್ಪರ ಮೊಕ ನೋಡಿ ಉಣ್ಣುವ ಶಿಕ್ಷೆಗಿಂತ, ಟಿ.ವಿ. ನೋಡುತ್ತ ಉಣ್ಣುವುದು ಅಂದರೆ, ಇಬ್ಬರೂ ಒಂದೇ ಕೆಲಸದಲ್ಲಿ ತೊಡಗಿಕೊಂಡಿರುವುದು ಎಂಬ ಭ್ರಮೆಯನ್ನು ಆರೋಪಿಸಿಕೊಳ್ಳುವುದಾಗಿದೆ. ಕನಿಷ್ಠ ಬೇರೆ ಬೇರೆ ಮೊಬೈಲ್ ಸ್ಕ್ರೀನ್‌ಗಳಲ್ಲಿ ಕಳೆದುಹೋಗದೆ, ಎರಡು ಜೊತೆ ಕಣ್ಣುಗಳು ಒಂದೇ ಸ್ಕ್ರೀನ್‌ನಲ್ಲಿವೆ ಎಂಬುದೇ ಒಂಥರಾ ಖುಷಿಯ ಸಂಗತಿ. ತಾಟು ಖಾಲಿ ಆಯ್ತು ಅಂದರೆ, ಮತ್ತೆ ಎರಡು ವಿರುದ್ಧ ವರ್ತುಲಗಳು ಅವುಗಳ ಪಾಡಿಗವು ಸುತ್ತುತ್ತವೆ. ಯಾರಾದರೂ ಸತ್ತರೆ ಕೆಟ್ಟರೆ ಸುದ್ದಿ ಹಂಚಿಕೊಳ್ಳುತ್ತಾರೆ. ಇಬ್ಬರೂ ಒಟ್ಟಿಗೆ ಹೋಗುತ್ತಾರೆ. ಮದುವೆಗಾದರೆ ಸಿಂಗರಿಸಿಕೊಂಡು, ಮಸಣಕ್ಕಾದರೆ ಸಿಂಪಲಿಸಿಕೊಂಡು, ಒಟ್ಟಿಗೇ ಒಟ್ಟೊಟ್ಟಿಗೇ. ಇಬ್ಬರದೂ ಒಂದೇ ಕಂಪನಿಯಲ್ಲೇ ಕೆಲಸ. ಅದು ಯಾಕೋ. ಇದುವರೆಗಿನ ಮ್ಯಾನೇಜಿಂಗ್ ಡೈರೆಕ್ಟರ್ಸ್‌ಗಳು ಯಾರೂ ಈ ಗಂಡ-ಹೆಂಡಿರನ್ನು ಅಗಲಿಸಿ, ಶಿಫ್ಟ್ ಬದಲಿಸಿ ಆರ್ಡರ್ ಹಾಕಿಲ್ಲ. ಹಾಗಾದರೂ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಂತ ಅವಳಿಗೆ ಆಗಾಗ ಅನ್ನಿಸಿದೆ. ಆದರೇನು? ಬೆಳಗಾದರೆ, ಒಂದೇ ಬೈಕ್‌ನಲ್ಲಿ ಎರಡು ಹಳದಿ ಹೆಲ್ಮೆಟ್ ತಲೆಗಳು ರುಂಯ್ ಅಂತ ಹೊರಡೋದನ್ನು, ಅಕ್ಕಪಕ್ಕದ ಮನೆಯಂಗಳದ ಕಸಬರಿಗಿ ಕೈಗಳು ರಂಗೋಲಿ ಬೆರಳುಗಳು ನೋಡುತ್ತಾ, ‘ಅದೇಟು ಜಲ್ಮದ ಪುಣ್ಣೇವೋ ಈಕೀದು, ನಮ್ದೂ ಒಂದ್ ಬಾಳಾ’ ಅಂತ ಉಸಿರು ಹಾಕುತ್ತಾರೆ. ಅವಳು ಬ್ರ ಅಂದಿದ್ದು, ಅವನು ಕ್ರ ಅಂದಿದ್ದು ಹೊಚ್ಚಲು ದಾಟಿ ಹೊರಗ ಬರೂದಿಲ್ಲ. ಇಬ್ಬರೂ ನುಂಗಿ ನುಂಗಿ ಮನಸು ಬಾತು, ದೇಹವೂ ಬಾತು ಭಾರವಾಗಿದ್ದನ್ನು ಜಗತ್ತು ತಿಳಿಯುವುದಿಲ್ಲ.

ಹಾಂ ಅಂದಹಾಗೆ, ಬರೋ ತಿಂಗಳ ಮೊದಲ ವಾರದಲ್ಲಿ ಅವರ ಬಡಾವಣೆಯ, ಭಾರತೀಯ ಸಂಸ್ಕೃತಿ ರಕ್ಷಿತ ವೇದಿಕೆ ಎನ್ನುವ ಎನ್‌ಜಿಒ ಸಂಸ್ಥೆಯೊಂದು ಇವರನ್ನು ಸನ್ಮಾನಿಸಲಿದೆಯಂತೆ. ಬಡಾವಣೆಯ ಐದು ಆದರ್ಶ ಜೋಡಿಗಳನ್ನು ಸೆಲೆಕ್ಟ್ ಮಾಡಿದ್ದಾರಂತೆ. ಅದರಲ್ಲಿ ಇವರದೂ ಒಂದು. ಈ ವೇದಿಕೆಗೊಂದು ತಾತ್ವಿಕ ಕಾರಣವೂ ಇದೆಯಂತೆ. ಇಂದಿನ ಯುವ ಜನಾಂಗ, ಮದುವೆ